1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ
ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**237/2017**

ಹೆಸರುಃ ಪ್ರಭು ಚಾಸಾಃ 3

ತಂದೆಃ ಜಯಪ್ಪ ಫ್ರಾಸಾ 2

ವಯಸ್ಸುಃ 42 ವರ್ಷ

ಉದ್ಯೋಗಃ ಕೆನರಾ ಬ್ಯಾಂಕ್ ಗುತ್ತಿಗೆ ನೌಕರ

ವಾಸ ಸ್ಥಳಃ ಬಸವಪುರ

ಸಾಕ್ಷಿಗೆ ದಿನಾಂಕಃ 06-04-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ನಿಶಾನೆ ಪಿ 2 ಎಂದು ಗುರುತಿಸಲಾಯಿತು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 2 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2014 ರಲ್ಲಿ ಮಲ್ಲಿಕಾರ್ಜುನರವರ ಕೇಸ್ ನ ವಿಚಾರವಾಗಿ ಪೊಲೀಸರು ಕೆನರಾ ಬ್ಯಾಂಕ್ ಗೆ ಬಂದಿದ್ದು ಮಹಜರ್ ಕ್ರಮ ಜರುಗಿಸಿದ್ದು ಆ ಸಮಯದಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗೆ ನನ್ನ ಜೊತೆ ಚಾಸಾ 2 ರವರು ಹಾಗೂ ಕೆನರಾ ಬ್ಯಾಂಕ್ ನ ಶಾಖಾ ವ್ಯವಸ್ಥಾಪಕರಾದ ಚಾಸಾ 4 ರವರು ಸಹಿ ಮಡಿರುತ್ತಾರೆ. ಮಹಜರ್ ನ್ನು ಬೆಳಗ್ಗೆ 11.15 ರಿಂದ 12.15 ರವರೆಗೆ ಜರುಗಿಸಲಾಯಿತು.

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ -

ನಿಶಾನೆ ಪಿ 2 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನಿಶಾನೆ ಪಿ 2 ನ್ನು ಪೊಲೀಸರು ಬರೆದಿರುತ್ತಾರೆ ಅವರ ಹೆಸರು ನನಗೆ ನೆನಪಿಲ್ಲ. ನಾನು ನಿಶಾನೆ ಪಿ 2 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ  ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,
ಚನ್ನಗಿರಿ